ದಿನಾಂಕ 18.02.2026ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ- ಶ್ರೀ ಬಿ.ಬಿ.ಎಂ ವಕೀಲರಿಂದಃ-**

ನನ್ನ ತಾಯಿ ಜೀವಂತವಾಗಿದ್ದು, ನನಗೆ ಮೂರು ಸಹೋದರಿಯರು ಹಾಗೂ ಇಬ್ಬರು ಸಹೋದರರು ಇದ್ದಾರೆ. ನನ್ನ ಅಣ್ಣ ಮೈಸೂರಿನಲ್ಲಿ ವಾಸವಾಗಿದ್ದು, ತಮ್ಮ ಸೌದಿಅರೇಬಿಯಾದಲ್ಲಿ ನೆಲೆಸಿದ್ದಾರೆ. ನನ್ನ ಗಂಡ ಮೃತರಾದಾಗ ನನ್ನ ದೊಡ್ಡ ಮಗಳಿಗೆ 15 ವರ್ಷ ವಯಸ್ಸಾಗಿದ್ದು, ಎರಡನೇ ಮಗಳಿಗೆ 10 ವರ್ಷ ವಯಸ್ಸಾಗಿತ್ತು. ದೊಡ್ಡ ಮಗಳು ಗೋಣಿಕೊಪ್ಪದ ವಿದ್ಯಾನಿಕೇತನ್ ಕಾಲೇಜಿನಲ್ಲಿ ದ್ವಿತೀಯ ಪಿ.ಯು.ಸಿ ವ್ಯಾಸಂಗ ಮಾಡುತ್ತಿದ್ದಳು, 2ನೇ ಮಗಳು ಕಾವೇರಿ ಶಾಲೆಯಲ್ಲಿ ಓದುತ್ತಿದ್ದಳು. ನಾನು ಮತ್ತು ನನ್ನ ಗಂಡ 2007 ರಲ್ಲಿ ಬೆಂಗಳೂರಿಗೆ ಹೋಗಿ ನೆಲೆಸಬೇಕೆಂದು ತೀರ್ಮಾನ ಮಾಡಿದ ಸಂದರ್ಭದಲ್ಲಿ ಮಕ್ಕಳನ್ನು ಸಹಾ ಬೆಂಗಳೂರಿನಲ್ಲಿ ಓದಿಸುವ ತೀರ್ಮಾನ ಮಾಡಿದ್ದೆವು.

ನನ್ನ ಗಂಡ ಮೃತರಾದ 40ನೇ ದಿನದ ಕಾರ್ಯದಲ್ಲಿ ಕುಟುಂಬದ ಎಲ್ಲರೂ ಭಾಗವಹಿಸಿದ್ದರು. ಆ ಸಂದರ್ಭದಲ್ಲಿ ಕುಟುಂಬದ ಎಲ್ಲಾ ಸದಸ್ಯರು ನನ್ನನ್ನು ಒಳಗೊಂಡಂತೆ ನನ್ನ ಗಂಡನ ಆಸ್ತಿ ವಿಚಾರ ಮತ್ತು ವಾರಸುದಾರರ ಜೀವನ ನಿರ್ವಹಣೆಗೆ

ಸಂಬಂಧಿಸಿದಂತೆ ಮಾತುಕತೆ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ 40 ನೇ ದಿನದ ಕಾರ್ಯದಂದು ನನ್ನ ಅಣ್ಣ, ತಾಯಿ ಮತ್ತು ಸಹೋದರಿಯರು ಹಾಗೂ ಭಾವಂದಿರು ಹಾಜರಿದ್ದರು. ಕುಟುಂಬದ ಸದಸ್ಯರು ಸೇರಿದ್ದ ಸಭೆಯಲ್ಲಿ ನಾನೂ ಸಹಾ ಭಾಗವಹಿಸಿದ್ದು, ಆ ಸಂದರ್ಭದಲ್ಲಿ ನಾನು ನನ್ನ ಮಕ್ಕಳ ವಿಧ್ಯಾಭ್ಯಾಸಕ್ಕಾಗಿ ಬೆಂಗಳೂರಿಗೆ ಹೋಗಿ ನೆಲೆಸುವುದಾಗಿ ತಿಳಿಸಿ, ದಾವಾಸ್ವತ್ತುಗಳಲ್ಲಿ ನಮ್ಮ ಭಾಗದ ಹಿಸ್ಸೆಯ ಹಣವನ್ನು ನೀಡುವಂತೆ ಕೇಳಿರುತ್ತೇನೆ ಎಂದರೆ ಸರಿಯಲ್ಲ.

ದಾವಾಸ್ವತ್ತುಗಳನ್ನು ಮಾರಾಟ ಮಾಡುವುದಕ್ಕೆ ಸಂಬಂಧಿಸಿದಂತೆ ದಿನಾಂಕ 15.02.2015 ರಂದು ಪತ್ರಿಕೆಯಲ್ಲಿ ಪ್ರತಿವಾದಿಗಳು ಪ್ರಕಟಿಸಿದ್ದರು ಎಂದರೆ ಸರಿ. ದಿನಾಂಕ 18.02.2015 ರಂದು ನಾನು ಪ್ರತಿವಾದಿಗಳು ಹೊರಡಿಸಿದ್ದ ಪತ್ರಿಕಾ ಪ್ರಕಟಣೆಗೆ ತಕರಾರು ಇರುವುದಾಗಿ ಪತ್ರಿಕೆಯಲ್ಲಿ ಪ್ರಕಟಣೆಯನ್ನು ಪ್ರಕಟಿಸಿದ್ದೆನು ಎಂದರೆ ಸರಿ. ಪ್ರತಿ ವರ್ಷ ಬೇಸಿಗೆ ರಜೆಯನ್ನು ಕಳೆಯಲು ನನ್ನ ಗಂಡನ ಸಹೋದರ ಮತ್ತು ಸಹೋದರಿಯರು ಹಾಗೂ ಅವರ ಮಕ್ಕಳು ಮೇ ತಿಂಗಳಂದು ದಾವಾಸ್ವತ್ತುಗಳಲ್ಲಿ ಇದ್ದ ಮನೆಗೆ ಬಂದು ಇರುತ್ತಿದ್ದರು ಎಂದರೆ ಸರಿ.

ದಿನಾಂಕ 21.05.2015 ರಂದು ಅವರೆಲ್ಲರೂ ರಜೆ ಕಳೆಯಲು ದಾವಾಸ್ವತ್ತಿನಲ್ಲಿ ಮನೆಗೆ ಬಂದಿದ್ದರು ಎಂದರೆ ಸರಿ. ಆ

ಸಂದರ್ಭದಲ್ಲಿ ಅವರು ಮನೆಗೆ ಬರದಂತೆ ನಾನು ತಕರಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ತಕರಾರು ಮಾಡಿದೆನೆಂದು ಆರೋಪಿಸಿ, ಅವರು ನನ್ನ ವಿರುದ್ದ ಪೋಲೀಸರಿಗೆ ದೂರನ್ನು ನೀಡಿದ್ದರು ಎಂದರೆ ಸರಿ. ನಾನು ಪ್ರತಿವಾದಿಗಳ ವಿರುದ್ದ ಪೋಲೀಸರಿಗೆ ಪ್ರತಿ ದೂರನ್ನು ನೀಡಿದ್ದೆನು. ನಂತರ ಪೋಲೀಸ್ ಠಾಣೆಯಲ್ಲಿ ರಾಜೀ ತೀರ್ಮಾನವಾಗಿ ಇಬ್ಬರು ನೀಡಿದ್ದ ದೂರುಗಳನ್ನು ಹಿಂದಕ್ಕೆ ಪಡೆದುಕೊಂಡಿರುತ್ತೇವೆ.

ಪ್ರತಿವಾದಿಗಳು ದಾವಾಸ್ವತ್ತುಗಳಲ್ಲಿ ನನಗೆ 1/6 ಹಿಸ್ಸೆಯನ್ನು ನೀಡುವುದಾಗಿ ಒಪ್ಪಿದ್ದರಿಂದ ನಾನು ನೀಡಿದ್ದ ದೂರನ್ನು ವಾಪಸ್ಸು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ರಾಜೀ ತೀರ್ಮಾನದ ಕರಡು ಅರ್ಜಿಯನ್ನು ನನಗೆ ಕಳುಹಿಸಿಕೊಟ್ಟಿದ್ದರು ಎಂದರೆ ಸರಿಯಲ್ಲ. ರಾಜೀ ತೀರ್ಮಾನವಾದ ಬಳಿಕ, ದಿನಾಂಕ 28.05.2015 ರಂದು ನನ್ನ ಅತ್ತೆ, ಮಾವ, ಅವರು ಮಕ್ಕಳು ಮತ್ತು ಮೊಮ್ಮಕ್ಕಳು ಬೆಂಗಳೂರಿಗೆ ಹಿಂತಿರುಗಿ ಹೋಗಿರುತ್ತಾರೆ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.